## 27. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಮದಾರಿಪಾಳ್ಯ, ಶಿವಮೊಗ್ಗ ತಾ

**ಬೌಗೋಳಿಕ ಹಿನ್ನೆಲೆ:**-ಶಿವಮೊಗ್ಗ ತಾ ಸಹ್ಯಾದ್ರಿ ಕಾಲೇಜಿನ ಹಿಂಭಾಗದಲ್ಲಿರುವ ತುಂಗೆಯ ತೀರದಲ್ಲಿರುವ ಶಾಲೆಯೇ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಮದರಿಪಾಳ್ಯ ಈ ಶಾಲೆಯಲ್ಲಿ 2019-20ನೇ ಸಾಲಿನಲ್ಲಿ ಸರಿಯಾಗಿ 93 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು 1 ರಿಂದ 8ನೇ ತರಗತಿವರೆಗೆ ತರಗತಿಗಳು ನಡೆಯುತ್ತಿವೆ. ನಮ್ಮ ಶಾಲೆಗೆ ಬರುವ ಎಲ್ಲಾ ವಿದ್ಯಾರ್ಥಿಗಳು ಕೂಲಿ ಕಾರ್ಮಿಕರ ಮಕ್ಕಳಾಗಿದ್ದು, ಪೋಷಕರು ಬಹುತೇಕ ಮಂದಿ ಅನಕ್ಷರಸ್ಥರಾಗಿದ್ದಾರೆ. ಪ್ರಸ್ತುತ ಶಾಲೆಯು ಉರ್ದು ಮಾಧ್ಯಮದಲ್ಲಿ ನಡೆಯುತ್ತಿದೆ.




### ಮುಖ್ಯ ಶಿಕ್ಷಕರು ಎದುರಿಸಿದ ಸವಾಲುಗಳು :-

ಶಾಲೆಯ ಬಡ್ತಿ ಮುಖ್ಯೋಪಾಧ್ಯಾಯರು ಬೇರೆ ಶಾಲೆಗೆ ನಿಯೋಜನೆಗೊಂಡ ನಂತರ ಪ್ರಭಾರ ಮುಖ್ಯ ಶಿಕ್ಷಕಿಯಾಗಿ ಪ್ರಭಾರ ವಹಿಸಿಕೊಂಡ ಶ್ರೀಮತಿ ಶಂಶಿಯ ಅಂಜುಂ ಶಾಲೆಯ ಶೈಕ್ಷಣಿಕ /ಭೌತಿಕವಾಗಿ ಪ್ರಗತಿಯನ್ನು ಉತ್ತಮ ಪಡಿಸಲು ರೂಪರೇಷಗಳನ್ನು ಹಾಕುವುದು. ಭೌತಿಕ ಆಸ್ತಿಗಳಾದ ಶಾಲಾ ಕಟ್ಟಡ, ಶೌಚಾಲಯ, ಕಾರಿಡಾರ್ ದುರಸ್ತಿ ಹಾಗೂ ಸ್ವಚ್ಚತೆಗೆ ಅಗತ್ಯದ ಕ್ರಮ ಕೈಗೊಳ್ಳುವುದು, ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸುವುದು, ಶೈಕ್ಷಣಿಕ /ಪ್ರವೇಶ ದಾಖಲಾತಿ ಇತರೆ ದಾಖಲಾತಿಗಳು ಸಂರಕ್ಷಣೆ ಮಾಡುವುದು.

### ಬದಲಾವಣೆಗಾಗಿ ಅಳವಡಿಸಿಕೊಂಡ ತಂತ್ರಗಳು :-

- ಶಾಲಾ ಭೌತಿಕ ಆಸ್ತಿಗಳಾದ ಶಾಲಾ ಕಟ್ಟಡದ ಸುಣ್ಣ-ಬಣ್ಣ ಹೊಡೆಸಲು ಇಲಾಖೆಯ ಮೂಲಕ ಹಣ ಮಂಜೂರಾತಿಗಾಗಿ ಎಸ್‌ಡಿಎಂಸಿ ಸಹಭಾಗಿತ್ವದಲ್ಲಿ ಶ್ರಮಿಸುವುದು
- ಶಾಲಾ ಶೌಚಾಲಯದ ಸ್ವಚ್ಛತೆಗೆ ಆದ್ಯತೆ ನೀಡಿ, ಪ್ರತಿ ವಿದ್ಯಾರ್ಥಿಗೆ ಸ್ವಚ್ಛತೆಯ ಪ್ರಮುಖ್ಯತೆಯ ಅರಿವು ಮೂಡಿಸುವುದು ಇದರಿದ ಉಂಟಾಗುವ ತೊಂದರೆಗಳು ರೋಗ-ರುಜಿನಗಳು ಬಾರದಂತೆ ಸೂಕ್ತ ಮುನ್ನಚರಿಕೆ ಕ್ರಮಗಳ ಬಗ್ಗೆ ಆರೋಗ್ಯ ಇಲಾಖೆಯವರಿಂದ ಅರಿವು ಮೂಡಿಸುವುದು.
- ಕಲಿಕೆಯನ್ನು ಉತ್ತಮ ಪಡಿಸಲು ಸ್ಮಾರ್ಟ್ ಕ್ಲಾಸ್, ನಲಿಕಲಿ, ಕ್ರೀಡೆ, ಗ್ರಂಥಾಲಯ, ಪ್ರಯೋಗಾಲಯ, ಸರಳ ಗಣಿತ, ನುರಿತ ಅನುಭವಿಗಳಿಂದ ಉಪನ್ಯಾಸ ಇತ್ಯಾದಿಗಳ ಮೂಲಕ ಕಲಿಕೆಯನ್ನು ಉತ್ತಮ ಪಡಿಸುವುದು.

**ಶಿಕ್ಷಕರ ಸಹಕಾರ ಮತ್ತು ಭಾಗವಹಿಸುವಿಕೆ :-**

- ಪ್ರತಿ ಶಿಕ್ಷಕರು ಬೋದನೆಯೊಂದಿಗೆ ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸಲು ವಿಷಯವಾರು ಯೋಜನೆಗಳನ್ನು ರೂಪಿಸಿಕೊಂಡು ಕಾರ್ಯಗತಗೊಳಿಸಲಾಗುತ್ತಿದೆ.
- ದಾಖಲಾತಿಯನ್ನು ಉತ್ತಮ ಪಡಿಸಲು ಸಂತಸದಾಯಕ ಕಲಿಕೆಯನ್ನು ನಲಿ-ಕಲಿ ಮೂಲಕ ಉತ್ತೇಜಿಸಲಾಗುತ್ತಿದೆ
- ನಿಗದಿತ ಜವಾಬ್ದಾರಿಯೊಂದಿಗೆ ಪ್ರತಿ ಶಿಕ್ಷಕರಿಗೆ ನೀಡಿರುವ ಜವಾಬ್ದಾರಿಗಳನು ನಿರ್ವಹಿಸಿ ಶಾಲಾ ಪಗ್ರತಿಯನ್ನು ಉತ್ತಮ ಪಡಿಸುವಲ್ಲಿ ಶಾಲೆಯ ಸಹ ಶಿಕ್ಷಕರ ಪಾತ್ರ ಮತ್ತು ಸಹಕಾರ ಉತ್ತಮವಾಗಿರುತ್ತದೆ.

ಶಾಲೆಯ ಶೈಕ್ಷಣಿಕ ದಾಖಲಾತಿಯನು ಉತ್ತಮ ಪಡಿಸಲು ಈಗಾಗಲೇ ಪೂರ್ವ ಪ್ರಾಥಮಿಕ ಶಾಲೆಯನ್ನು ಶಾಲಾವರಣದಲ್ಲಿರುವ ಒಂದು ಕೊಠಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಸ್.ಡಿ.ಎಂ.ಸಿ ಹಾಗೂ ಪೋಷಕರ ನೆರವಿನಿಂದ ನಡೆಸಲಾಗುತ್ತಿದೆ. ಇದರಿಂದ ಪ್ರತಿ ವರ್ಷ 1ನೇ ತರಗತಿ ದಾಖಲಾತಿಗೆ ಪೂರಕವಾಗಿದೆ. ಇನ್ನು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಹಾಗು ಸ್ವಚ್ಛತೆಯ ಬಗ್ಗೆ ಜಾಗೃತಿ ನೀಡಲಾಗುತ್ತಿದೆ.

ನಲಿ-ಕಲಿ ತರಗತಿಗಳಿಗೆ ಸಂಬಂಧಿಸಿದಂತೆ ಉತ್ತಮವಾದ ಕೊಠಡಿಯನು ಹೊಂದಿದ್ದು, ಕ್ರಿಯಾಶೀಲ ಶಿಕ್ಷಕರು ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸುತ್ತಿದ್ದಾರೆ. ಇಂಗ್ಲೀಷ್ ಕಲಿಕೆಯನ್ನು ಉತ್ತಮ ಪಡಿಸಲು ಇಂಗ್ಲೀಷ್ ಕಾರ್ನರ್ ಹಾಗೂ ಇಂಗ್ಲೀಷ್ ಫೆಸ್ಟ್ ಆಚರಿಸಿ ಕಲಿಕೆಯನನು ಉತ್ತಮ ಪಡಿಸಲಾಗುತ್ತಿದೆ.

**ಬಿಸಿಯೂಟ :-** ಬಿಸಿಯೂಟದ ವ್ಯವಸ್ಥೆಯು ಅತ್ಯುತ್ತಮವಾಗಿ ನಡೆಯುತ್ತಿದ್ದು ಹಸಿದ ಒಡಲಿಗೆ ಬಿಸಿಯೂಟ ನೀಡುತ್ತಿದ್ದು, ಸ್ವಚ್ಛ ಹಾಗೂ ಗುಣಮಟ್ಟ ಕಾಪಾಡಲಾಗುತ್ತಿದೆ. ಇದರೊಂದಿಗೆ ಕ್ಷೀರಭಾಗ್ಯದಲ್ಲಿ ಎಲ್ಲಾ ವಿದ್ಯಾರ್ಥಿಗಳು ಫಲಾನುಭವಿಗಳಾಗಿರುತ್ತಾರೆ. ಉಚಿತ ಶೂ-ಸಾಕ್ಸ್ ಹಾಗೂ ಇತರೆ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಸರ್ಕಾರ ನೀಡುವ ಇತರೆ ಸೌಲಭ್ಯಗಳನ್ನು ಮಕ್ಕಳಿಗೆ ತಲುಪಿಸಲಾಗುತ್ತಿದೆ.

**ಪ್ರತಿಭಾ ಕಾರಂಜಿ:-** ಕಲಿಕೆಯ ಜೊತೆಯಲ್ಲಿ ಪ್ರತಿಭೆಯನ್ನು ಗುರುತಿಸುವ ಕಾರ್ಯ ನಡೆಯುತ್ತಿದ್ದು, ಈ ಶಾಲೆಯ ವಿದ್ಯಾರ್ಥಿಗಳು ತಾಲ್ಲೂಕು/ಜಿಲ್ಲಾ ಹಂತಗಳಲ್ಲಿ ಭಾಗವಹಿಸಿ ಶಾಲೆಗೆ ಕೀರ್ತಿ ತಂದಿರುತ್ತಾರೆ.

**ಸ್ಮಾರ್ಟ್ ಕ್ಲಾಸ್:-** ಇಂದಿನ ವೇಗಕ್ಕೆ ಅನುಗುಣವಾಗಿ ಶೈಕ್ಷಣಿಕ ಕಲಿಕೆಯನ್ನು ಅತ್ಯಂತ ಉತ್ತಮ ರೀತಿಯಲ್ಲಿ ಕಲಿಸಲು ಸ್ಮಾರ್ಟ್‌ಕ್ಲಾಸ್‌ಗಳನ್ನು ನಡೆಸುತ್ತಿದ್ದು ಕಲಿಕೆಯನ್ನು ಉತ್ತಮ ಪಡಿಸಲಾಗುತ್ತದೆ.

**ವಿಜ್ಞಾನ ಪ್ರಯೋಗಶಾಲೆ:-** ನಮ್ಮ ಶಾಲೆಯ ವಿಜ್ಞಾನ ಪ್ರಯೋಗಾಲಯವನ್ನು ಹೊಂದಿದ್ದು ವಿದ್ಯಾರ್ಥಿಗಳೇ ಅನೇಕ ಪ್ರಯೋಗಗಳನ್ನು ಮಾಡುತ್ತಿರುತ್ತಾರೆ. ಈ ಬಗ್ಗೆ ವಿಜ್ಞಾನ ಶಿಕ್ಷಕರು ಮಾರ್ಗದರ್ಶನ ನೀಡುತ್ತಿದ್ದಾರೆ.

**ಪೋಷಕರಿಗೆ ಜಾಗೃತಿ:-** ಪ್ರತಿ ಮಾಹೆಯು ವಿದ್ಯಾರ್ಥಿ ಪೋಷಕರಿಗೆ ಒಂದೊಂದು ವಿಷಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

**ಶಿಕ್ಷಕರ ಪಾತ್ರ :-** ಮಕ್ಕಳ ಕಲಿಕೆಯನ್ನು ಉತ್ತಮ ಪಡಿಸುವ ನಿಟ್ಟಿನಲ್ಲಿ ಈ ಶಾಲೆಯಲ್ಲಿ ಉನ್ನತ ವ್ಯಾಸಂಗ ಹೊಂದಿದ ಕ್ರಿಯಾಶೀಲ ಶಿಕ್ಷಕರಿದ್ದು, ಕಲಿಕೆಯನ್ನು ಉತ್ತಮ ಪಡಿಸಲಾಗುತ್ತಿದೆ. ಅನೇಕ ರೀತಿಯ ಪಾಠೋಪಕರಣಗಳನ್ನು ಬಳಸಿ ಕಲಿಕೆಯನ್ನು ಉತ್ತಮ ಪಡಿಸುತ್ತಿದ್ದಾರೆ.

**ಭಾಗಿದಾರರ ಭಾಗವಹಿಸುವಿಕೆ :-** ಬಹುತೇಕ ಪೋಷಕರು ಕೂಲಿ ಕಾರ್ಮಿಕರಾಗಿದ್ದು, ಅನಕ್ಷರಸ್ಥರೂ ಆಗಿರುತ್ತಾರೆ. ಕೆಲವೇ ಸಂದರ್ಭಗಳಲ್ಲಿ ಶಾಲಾ ಸಭೆಗಳಿಗೆ ಹಾಜರಾಗುತ್ತಾರೆ. ಕಲಿಕೆ ಮತ್ತು ಶಾಲಾ ಪ್ರಗತಿ ಬಗ್ಗೆ ಸೂಕ್ತ ಸಲಹೆ ಸೂಚನೆ ನೀಡಿರುತ್ತಾರೆ.

ಎಸ್.ಡಿ.ಎಂ.ಸಿ ಅಧ್ಯಕ್ಷರು/ ಉಪಾಧ್ಯಕ್ಷರು ಶಾಲೆಗೆ ಆಗಾಗ್ಗೆ ಬೇಟಿ ನೀಡಿ ಶಾಲಾ ಶೈಕ್ಷಣಿಕ ಪ್ರಗತಿಗೆ ಸಂಬಂಧಿಸಿದ ಅಂಶಗಳ ಬಗ್ಗೆ ಮುಖ್ಯ ಶಿಕ್ಷಕರು ಮತ್ತು ಸಹ ಶಿಕ್ಷಕರೊಂದಿಗೆ ಚರ್ಚಿಸಿ ಸಲಹೆ ನೀಡುತ್ತಾರೆ. ಕಲಿಕೆಯನ್ನು ಉತ್ತಮ ಪಡಿಸಲು ಹಾಗೂ ಶೈಕ್ಷಣಿಕ ಪ್ರಗತಿ ಬಗ್ಗೆ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಚರ್ಚಿಸಿ ರೂಪುರೇಷ ಹಾಕಿ, ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಬಗ್ಗೆ ಸಲಹೆ ನೀಡುತ್ತಾ ಭಾಗವಹಿಸುತ್ತಿರುತ್ತಾರೆ.

ಒಟ್ಟಾರೆ ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ಶಿಕ್ಷಕರು/ಪೋಷಕರು/ಎಸ್.ಡಿ.ಎಂ.ಸಿಯವರ ಸಹಕಾರದೊಂದಿಗೆ ಶಾಲೆ ಮುನ್ನಡೆಯುತ್ತಿದೆ, ಭವ್ಯ ಭಾರತದ ಪ್ರಜೆಗಳನ್ನು ನಿರ್ಮಿಸುವ ಮಹತ್ತರ ಜವಾಬ್ದಾರಿಯನ್ನು ಹೊತ್ತಿದೆ. ಭವಿಷ್ಯದಲ್ಲಿ ಈ ಶಾಲೆಯನ್ನು ಉತ್ತಮ ಮಾದರಿ ಶಾಲೆಯನ್ನಾಗಿಸುವ ಆಶಾಭಾವನೆ ಹೊಂದಿದ್ದೇವೆ.













ವಿಶೇಷ ದಾಖಲಾತಿ ಆಂದೋಲನ ಮತ್ತು
ಸಾಮಾನ್ಯ ದಾಖಲಾತಿ ಆಂದೋಲನ

